ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ
ಶ್ರೀರಂಗಪಟ್ಟಣ
ಸಿಸಿ 61/2019 ಸಿಡಬ್ಲ್ಯೂ : 5 ಪಿ ಡಬ್ಲ್ಯೂ : 3

| | |
|---|---|
| ಹೆಸರು | ಮಹೇಶ್ |
| ತಂದೆಯ ಹೆಸರು | ಕುಮಾರ |
| ವಯಸ್ಸು | 30 ವರ್ಷ |
| ವೃತ್ತಿ | ಖಾಸಗೀ ಕೆಲಸ |
| ವಾಸ | ಮರಳಗಾಲ ಗ್ರಾಮ |

ದಿನಾಂಕಃ02.03.2021 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ನನಗೆ ಸಹಿ ಮಾಡಲು ಬರುತ್ತದೆ . ಈಗ ನೋಡುತ್ತಿರುವ ನಿಪಿಃ 6 ಎಂದು ಗುರುತಿಸಿದ ದಾಖಲೆಯಲ್ಲಿರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿಃ 6(ಬಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ನಿಪಿಃ 7 ಎಂದು ಗುರುತಿಸಿದ ದಾಖಲೆಯಲ್ಲಿಯ ಸಹಿ ನನ್ನದೇ ಇರುತ್ತದೆ. ಸದರಿ ಸಹಿಯನ್ನು ಕೂಡ ಈ ಮೇಲೆ ಹೇಳಿದಂತೆ ಪಂಚನಾಮೆಗೆಂದು ಸಹಿ ಮಾಡಿದಾಗ ಅದನ್ನು ಮಾಡಿರುತ್ತೇನೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿಃ 7(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಈಗ್ಗೆ 2 ವರ್ಷದ ಹಿಂದೆ ಒಂದು ದಿನ ಸಂಜೆ 8.00 ಗಂಟೆ ಸಮಯದಲ್ಲಿ ನಮ್ಮ ಊರಿನ ದೇವಸ್ಥಾನದ ಬಳಿ ಹೋಗುತ್ತಿರುವಾಗ ಪೋಲೀಸರು ಅಲ್ಲಿ ಅಪಘಾತವಾಗಿದೆ ಎಂದು ಅದರಿಂದ ದಾಖಲೆಗೆ ಸಹಿ ಹಾಕು ಎಂದು ಕೇಳಿದ್ದು , ಅದರಿಂದ ನಾನು ಆ ದಾಖಲೆಗೆ ಸಹಿ ಹಾಕಿರುತ್ತೇನೆ. ಪೋಲೀಸರು ನನ್ನ ಸಮಕ್ಷಮದಲ್ಲಿ ಅಪಘಾತದ ಸ್ಥಳದ ಬಗ್ಗೆ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಮತ್ತು ಅಪಘಾತದಲ್ಲಿ ಭಾಗಿಯಾದ

ವಾಹನಗಳನ್ನು ಕೂಡ ನನ್ನ ಸಮಕ್ಷಮದಲ್ಲಿ ಜಪ್ತುಗೊಳಿಸಿರುವುದಿಲ್ಲ ಮತ್ತು ಅದೇ ರೀತಿ ನನ್ನ ಸಮಕ್ಷಮದಲ್ಲಿ ಸ್ಥಳದ ಸ್ಥಿತಿಗತಿಯ ಬಗ್ಗೆ ಕಚ್ಚಾ ನಕಾಶೆಯನ್ನು ಕೂಡ ತಯಾರಿಸಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.
ಪಾಟೀ ಸವಾಲು ಃ ಎ ಪಿ ಪಿ ರವರಿಂದಃ

2. ದಿಃ 21.05.2019 ರಂದು ಸಂಜೆ 7.30 ರಿಂದ 8.00 ಗಂಟೆ ಸಮಯದಲ್ಲಿ ಪೋಲೀಸರು ನಮ್ಮ ಊರಿನ ಆಂಜನೇಯ ದೇವಸ್ಥಾನದ ಎದುರಿನಲ್ಲಿ ಹಾದು ಹೋಗಿರುವ ರಸ್ತೆಯ ಮೇಲೆ ನನ್ನನ್ನು ಮತ್ತು ಚಾಸಾಃ 4 ಇವರನ್ನು ಕರೆಯಿಸಿದ್ದು ಆಗ ಅಲ್ಲಿ ಚಾಸಾಃ 2 ಹಾಜರಿದ್ದು , ಅಲ್ಲಿ ಅಪಘಾತವಾಗಿರುವುದುಎಂದು ಸ್ಥಳವನ್ನು ತೋರಿಸಿದ್ದು ಆಗ ಪೋಲೀಸರುಆ ಸ್ಥಳದ ಸ್ಥಿತಿಗತಿಯ ಬಗ್ಗೆ ಪಂಚನಾಮೆಯನ್ನು ಈಗಾಗಲೇ ಗುರುತಿಸಲಾದ ನಿಪಿಃ 6 ರಂತೆ ಬರೆದುಕೊಂಡು ಸದರಿ ಸ್ಥಳದಲ್ಲಿ ಅಪಘಾತದಲ್ಲಿ ಭಾಗಿಯಾದ 2 ಬೈಕ್ ಗಳು ಇದ್ದು ಅವುಗಳನ್ನು ತಮ್ಮ ವಶಕ್ಕೆ ಪಡೆದು ಅವುಗಳಿಗೆ ಆದ ಜಕಂ ಗಳನ್ನು ಪಂಚನಾಮೆಯಲ್ಲಿ ನಮೂದಿಸಿಕೊಂಡುನಂತರ ಆ ಪಂಚನಾಮೆಯ ಅಂಶಗಳನ್ನು ನಮಗೆ ಓದಿ ಹೇಳಿದ್ದು ಆಗ ನಾನು ಆ ದಾಖಲೆಗೆ ನಿಪಿಃ 6 (ಬಿ) ಯಂತೆ ನನ್ನ ಸಹಿ ಮಾಡಿರುವೆ ಎಂದು ಸೂಚಿಸುವುದು ಸರಿಯಲ್ಲ. ಅದೇ ರೀತಿ ಆ ಸಮಯದಲ್ಲಿ ಪಂಚನಾಮೆ ಮಾಡಿದ ಸ್ಥಳದ ಸ್ಥಿತಿಗತಿಯ ಬಗ್ಗೆ ಪೋಲೀಸರು ಈಗಾಗಲೇ ಗುರುತಿಸಲಾದ ನಿಪಿಃ 7 ರಂತೆ ಕಚ್ಚಾ ನಕಾಶೆಯ ತಯಾರಿಸಿದ್ದು ಆಗ ನಾನು ಹಾಜರಿದ್ದು ಅದಕ್ಕೆ ನಿಪಿಃ 7(ಬಿ) ಯಂತೆ ಇರುವ ನನ್ನ ಸಹಿಯನ್ನು ಮಾಡಿರುವೆ ಎಂದು ಸೂಚಿಸುವುದು ಸರಿಯಲ್ಲ. ನಿಪಿಃ 6 ಮತ್ತು 7 ರಂತೆ ಪೋಲೀಸರು ಅಪಘಾತದ ಸ್ಥಿತಿಗತಿಯ ಬಗ್ಗೆ ನಮ್ಮಗಳ ಸಮಕ್ಷಮ ಪಂಚನಾಮೆ ಮಾಡಿ ಕಚ್ಚಾ ನಕಾಶೆಯನ್ನು ತಯಾರಿಸಿ ಸ್ಥಳದಿಂದ 2 ವಾಹನಗಳನ್ನು ಜಪ್ತುಗೊಳಿಸಿಕೊಂಡು ಹೋಗಿದ್ದು ಮತ್ತು ಆವಿಷಯವೆಲ್ಲ ನನಗೆ ಗೊತ್ತಿದ್ದು ಆದರೂ ಕೂಡ ನನಗೆ ಈಗ ಗೊತ್ತಿಲ್ಲವೆಂದು ಮತ್ತು ನನ್ನ ಸಮಕ್ಷಮದಲ್ಲಿ

ಪೋಲೀಸರು ಯಾವುದೇ ಪಂಚನಾಮೆಯನ್ನು ಮಾಡಿಲ್ಲವೆಂದು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಆರೋಪಿ ಪರ : ಶ್ರೀ ಬಿ ಎಸ್ ಸಿ ವಕೀಲರಿಂದಃ</u>

ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ .